ಶಾರಿಯ ವಯಸ್ಸಿನ್ನು ಚಿಕ್ಕದು ಅಲ್ಲದೆ ಈಗಂತೂ ಹೆಣ್ಣು ಮಕ್ಕಳಿಗೇ ಬರಗಾಲ, ಗಂಡು ಸಿಗುವುದು ತೀರಾ ಕಷ್ಟವೇನಲ್ಲ ಎಂದು ಅವಳಿಗೆ ಎರಡನೇಯ ಮದುವೆ ಮಾಡಲೇಬೇಕೆಂದು ಮನೆಯವರೆಲ್ಲ ಸೇರಿ ಗಂಡು ಹುಡುಕಿದ್ದೇ ಹುಡುಕಿದ್ದು. ಕಡೆಯಲ್ಲಿ ಸಿಕ್ಕವನೇ ಸುಧಾಕರ; ಮನೆಗೊಬ್ಬನೇ ಮಗ. ಊರಿನಲ್ಲೇ ಇದ್ದು ತೋಟ ಮನೆ ಸಂಭಾಳಿಸಿಕೊಂಡು ಹೋಗುತ್ತಿದ್ದವ. ಮದುವೆಯನ್ನೇ ಕಾಣದೆ ಮೂವತ್ತೆಂಟು ದಾಟುತ್ತಿದ್ದವ. ಎರಡು ಮಕ್ಕಳ ಜೋಜಾರ ತನಗಿರಲಿ ಎಂದು ಶಾರಿಯ ಜೊತೆ ಪುರುಷೋತ್ತಮನ ಎರಡು ಮಕ್ಕಳನ್ನೂ ಒಪ್ಪಿಬಿಟ್ಟ ಸುಧಾಕರ ಶಾರಿಯ ಅಪ್ಪ ಅಮ್ಮನ ಕಣ್ಣಲ್ಲಿ ದೇವರಂತೆನಿಸಿಕೊಂಡ ಎಂದರೆ ಬಹಳ ಉತ್ಪ್ರೇಕ್ಷೆಯೇನಾಗಿರಲಿಕ್ಕಿಲ್ಲ.

ತನ್ನವೇ ಎರಡು ಮಕ್ಕಳನ್ನು ಹೆತ್ತವಳ ಹೊಟ್ಟೆ ಕಂಡರೆ ಅಸಹ್ಯ ಎನ್ನುವುದೋ, ಭಯ ಎನ್ನುವುದೋ, ಒಟ್ಟಿನಲ್ಲಿ ಯಾವುದೋ ಕಾರಣಕ್ಕಾಗಿ ದೂರ ಸರಿಯುತ್ತಿದ್ದ ಪುರುಷೋತ್ತಮ, ಇನ್ನು ಸುಧಾಕರನಿಗೆ ಎಂತಹ ಭಾವನೆ ಬಂದೀತು! ಬಸಿರು–ಬಾಳಂತನ, ಮಕ್ಕಳು–ಮರಿ ಕಾಣದವನಿಗೆ ದೇಹದ ಬದಲಾವಣೆ ಸಹಜ ಎಂದು ಎನ್ನಿಸುವುದಾದರೂ ಹೇಗೆ? ಹೆತ್ತವರಿಗೇ ತನ್ನ ಹಿಂಜರಿಕೆಯನ್ನು ಹೇಳಿಕೊಳ್ಳಲಾಗದಿದ್ದವಳು ಮದುವೆಗೂ ಮುನ್ನ ಸುಧಾಕರನಿಗೆ ಏನಂತ ವಿವರಣೆ ಕೊಟ್ಟು ಉತ್ತರ ಪಡೆದಾಳು!

ಕಾಲೇಜಿಗೆ ಹೋಗುವ ಕಾಲದಲ್ಲಿ, ಮೂರುಸಂಜೆಯ ಬೆಳಕಲ್ಲಿ ಶಾರಿಯ ಎಡಗೈ ಹಿಡಿದು ಗೆಳತಿ ಪೂರ್ಣಿ, 'ಅಯ್ಯೋ ರಾಮಾ, ನಿಂಗೆ ಎರಡು ಮದುವೆಯ ಭಾಗ್ಯ ಉಂಟು, ಇಲ್ಲಿ ನೋಡು ಎರಡೆರಡು ಕಂಕಣದ ಗೆರೆ' ಅಂತ ಕಣ್ಣು ಮಿಟುಕಿಸಿದಾಗ,

'ಮಕ್ಕಳೂ ನಾಲ್ಕಾಗಿರಬೇಕು ಸರಿಯಾಗಿ ನೋಡು, ಅವನವೆರಡು, ಇವನವೆರಡು' ಎಂದಿದ್ದಳು ಶಾರಿ. ಹುಡುಗಾಟಿಕೆಯಲ್ಲಿಯೇ ಆದರೂ ಮದುವೆ ಎಂದೊಡನೆ ಮೈ ಝುಮ್ಮೆನ್ನುವ ದಿನಗಳವು; ಒಂದೋ ಎರಡೋ ಎಂಬುದೆಲ್ಲ ಸಂಬಂಧಪಡದವಾಗಿದ್ದವು ಅಷ್ಟೇ.

ಮದುವೆಯ ಹೊಸತರಲ್ಲಿ ದೈಹಿಕ ಆಕರ್ಷಣೆಯಿದ್ದರೂ ಸಂಬಂಧ ಬಲಿಯುತ್ತ ಅದು ದೇಹವನ್ನು ಮೀರಿ ಬೆಳೆದುಬಿಡುತ್ತದೆ ಎಂದು ಗೋಟಡಿಕೆ ಆರಿಸುತ್ತ ಆಡಿದ ಬೋಳು ಹಣೆಯ ಅಜ್ಜಿಗೆ ಅಜ್ಜನ ಪ್ರೀತಿ ನೆನಪಾಗಿದ್ದಿತ್ತೆ? ಪುರುಷೋತ್ತಮನೊಂದಿಗಿನ ಸಂಬಂಧ ದೇಹವನ್ನು ಬಿಟ್ಟು ಬೆಳೆಯಲಾಗದೆ ಮುರುಟಿದ್ದು ನೆನಪಾಗಿ ತನ್ನ ನಾಳೆಗಳಲ್ಲಿಯೂ ಅಭದ್ರತೆ ಕಾಣತೊಡಗಿದ್ದಳು ಶಾರಿ.

ಬೆಸೆದುಕೊಳ್ಳುವ ಹೊಸ ಸಂಬಂಧದ ಬಗ್ಗೆ ತನಗೇ ನಂಬಿಕೆಯಿಲ್ಲ, ಮಕ್ಕಳಿಗೆ ಅಪರೂಪಕ್ಕೆ ಕಾಣುವ ಅಪ್ಪನಿಗಿಂತ ಸುಧಾಕರನೆನ್ನುವ ಮನೆಯಲ್ಲೇ ಇರುವ ಅಪ್ಪ ಹೇಗನ್ನಿಸುತ್ತಾನೋ?

ಬಾಯಿ ಸೋಲುವಷ್ಟು ಹುಗುಸಿ, ಹಲುಬಿ ಬಂದ ತಾರತ್ತೆ, 'ಶಾರೀ, ನಿನ್ನ ಹಳೆ ಮಾವನ ಫೋನು ಬಂದಿತ್ತಂತೆ. ಮದುವೆಗೆ ಬರಲಾಗದು ಅಲ್ಲಿಂದಲೇ ಆಶೀರ್ವಾದ ಮಾಡುತ್ತೇವೆ ಎಂದರಂತೆ. ಗಂಡನನ್ನೇನೋ ಬದಲಿ ಮಾಡಬಹುದು, ಮಕ್ಕಳನ್ನ ಬದಲಿ ಮಾಡ್ಕೋಬಹುದಾ! ಪಾಪ ಬಡೀ ಜನ.'

'ಕತೆ ಗೊತ್ತಾ, ಒಮ್ಮೆ ದೇವರು ತಾಯಿ ಮತ್ತು ಹೆಂಡತಿಯ ಹೊಟ್ಟೆಯಲ್ಲಿ ಅಕ್ಕಿ ಇಟ್ಟು, ಆ ಮನುಷ್ಯನಿಗೆ ಕಷ್ಟ ಕೊಟ್ಟನಂತೆ. ಮಗನ ಕಷ್ಟಕ್ಕೆ ನೊಂದ ತಾಯಿಯ ತಾಪಕ್ಕೆ ಹೊಟ್ಟೆಯಲ್ಲಿದ್ದ ಅಕ್ಕಿ ಬೆಂದು ಅನ್ನವಾಗಿತ್ತಂತೆ, ಹೆಂಡತಿಯ ಹೊಟ್ಟೆಯಲ್ಲಿದ್ದ ಅಕ್ಕಿ ಹಾಗೆಯೇ ಇತ್ತಂತೆ ಗೊತ್ತಾ!' ತಾರತ್ತೆಗೆ ಸಂದರ್ಭ ಬೇಕಷ್ಟೇ.

ಅತ್ತಲಾಗೇ ಗೆರಶಿ ಹಿಡಿದು ಬಂದ ಮಹೇಶ್ವರಿ, 'ಎಂತಾ ಮಾತು ಅಂತ ಆಡುತ್ತೀರಿ ತಾರತ್ತಿಗೆ,